(35th)

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಜಿಎಂ\1615\2015/ಡಿ-24

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:14/05/2020

**ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ**

**ವಿಷಯ**: ಸರ್ಕಾರಿ ನೌಕರರಾದ ಹಾವೇರಿ ಜಿಲ್ಲೆ ಗುತ್ತಲ ಗ್ರಾಮ ಪಂಚಾಯತ್‌ನ 1)ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ನಾಗೇಂದ್ರಪ್ಪ ಪುಟ್ಟಪ್ಪ ಮಟ್ಟಿಮನಿ [ಪ್ರಸ್ತುತ ನಿವೃತ್ತ] ಮತ್ತು ಅಧ್ಯಕ್ಷರಾಗಿದ್ದ 2) ಶ್ರೀಮತಿ.ದ್ಯಾಮವ್ವ ವಾಸಪ್ಪ ಸನದಿ ರವರ ವಿರುದ್ಧದ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ.

******

ಹಾವೇರಿ ಜಿಲ್ಲೆ ಮತ್ತು ತಾಲ್ಲೂಕ್ ಗುತ್ತಲ ನಿವಾಸಿಯಾದ ಶ್ರೀ.ಪರಸಪ್ಪ ನೀಲಪ್ಪ ಗಿರಿಯಪ್ಪನವರ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಹಾವೇರಿ ಜಿಲ್ಲೆ ಗುತ್ತಲ ಗ್ರಾಮ ಪಂಚಾಯತ್‌ನ 1)ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ನಾಗೇಂದ್ರಪ್ಪ ಪುಟ್ಟಪ್ಪ ಮಟ್ಟಿಮನಿ [ಪ್ರಸ್ತುತ ನಿವೃತ್ತ], ಅಧ್ಯಕ್ಷರುಗಳಾಗಿದ್ದ 2) ಶ್ರೀ.ಬಷೀರ್ ಅಹಮ್ಮದ್ ಈ ಬಾಳೇಕಾಯಿ, 3) ಶ್ರೀಮತಿ.ಜಯವ್ವ ಕೋಂ ಮುತ್ತಪ್ಪ ಅರಿಕಟ್ಟಿ ಮತ್ತು 4) ಶ್ರೀಮತಿ.ದ್ಯಾಮವ್ವ ವಾಸಪ್ಪ ಸನದಿ (ಇನ್ನು ಮುಂದೆ, ಕ್ರಮವಾಗಿ, '1 ರಿಂದ 4ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ**:– 2013–14ನೇ ಸಾಲಿನಲ್ಲಿ ಹಾವೇರಿ ಜಿಲ್ಲೆ ಮತ್ತು ತಾಲ್ಲೂಕಿನ ಗುತ್ತಲ ಗ್ರಾಮ ಪಂಚಾಯತ್‌ನಲ್ಲಿ 13ನೇ ಹಣಕಾಸು ಯೋಜನೆಯಡಿಯಲ್ಲಿ 1 ರಿಂದ 4ನೇ ಎದುರುದಾರರು –

1) ಕುಡಿಯುವ ನೀರಿನ ಬಗ್ಗೆ ಪಂಪ್ ಮೋಟಾರ್ ದುರಸ್ತಿ ಕಾಮಗಾರಿಯಲ್ಲಿ ಬೋಗಸ್ ಬಿಲ್ಲುಗಳನ್ನು ಮಾಡಿ, ಸರ್ಕಾರಕ್ಕೆ ತುಂಬ ಬೇಕಾದ ತೆರಿಗೆಯನ್ನು ನಮೂದಿಸದೆ, ಧರಪಟ್ಟಿ ಇಲ್ಲದೆ ತಮಗೆ ಬೇಕಾದ ರೀತಿಯಲ್ಲಿ ಧರಗಳನ್ನು ನಮೂದಿಸಿ ನಿಯಮಬಾಹಿರವಾಗಿ ಹಣ ಸಂದಾಯ ಮಾಡಿ ಹಣ ದುರುಪಯೋಗ ಪಡಿಸಿಕೊಂಡಿದ್ದಾರೆ;

355



2) ಕುಡಿಯುವ ನೀರಿನ ಸಾಮಗ್ರಿಗಳನ್ನು ಖರೀದಿಸಿದ ಬಗ್ಗೆ ಧರಪಟ್ಟಿಯ ಪ್ರಕಾರ ಹಣ ಸಂದಾಯ ಮಾಡದೆ ಹೆಚ್ಚಿನ ಧರದಲ್ಲಿ ಬಿಲ್ಲುಗಳನ್ನು ಪಡೆದು ಹಣ ದುರುಪಯೋಗ ಮಾಡಿಕೊಂಡಿದ್ದಾರೆ; ಪಂಚಾಯತ್ ನಿವೇಶನಗಳನ್ನು ಅದಲು-ಬದಲು ಮಾಡಿ, ಮಾರಾಟ ಮಾಡಿ ಅಕ್ರಮ ಹಣ ಸಂಪಾದನೆ ಮಾಡಿದ್ದಾರೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನ ಆಪಾದನೆಗಳನ್ನು ಅಲ್ಲಗಳೆದಿದ್ದಾರೆ.

4. ಎರಡರಿಂದ 4ನೇ ಎದುರುದಾರರುಗಳು ಆಕ್ಷೇಪಣೆಗಳನ್ನು ಸಲ್ಲಿಸಿಲ್ಲ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಈ ಕೆಳಗೆ ಹೇಳಿದ ದಾಖಲೆಗಳಿವೆ –

1) ಪಿವಿಸಿ ಪೈಪ್ಸ್ ಮತ್ತು ಇತರೆ ಸಾಮಗ್ರಿಗಳನ್ನು ಪೂರೈಸುವಂತೆ ಕೋರಿ 1 ಮತ್ತು 4ನೇ ಎದುರುದಾರರುಗಳು ಕೆ.ಕೆ.ಪೈಪ್ಸ್, ರಾಣೇಬೆನ್ನೂರು ರವರಿಗೆ ಪಂಚಾಯತ್ ಲೆಟರ್ ಹೆಡ್‌ನಲ್ಲಿ ಬರೆದಿರುವ ದಿ:18/09/2013, 12/10/2013, 30/11/2013, 07/12/2013, 09/12/2013, 12/02/2014, 14/03/2014 ಮತ್ತು 09/05/2014ರ ಪತ್ರಗಳು;
2) ಪಿವಿಸಿ ಪೈಪ್ಸ್ ಮತ್ತು ಇತರೆ ಸಾಮಗ್ರಿಗಳನ್ನು ಪೂರೈಸುವಂತೆ ಕೋರಿ 1 ಮತ್ತು 4ನೇ ಎದುರುದಾರರುಗಳು ಕೆ.ಕೆ.ಎಲೆಕ್ಟ್ರಿಕಲ್ಸ್, ರಾಣೇಬೆನ್ನೂರು ರವರಿಗೆ ಪಂಚಾಯತ್ ಲೆಟರ್ ಹೆಡ್‌ನಲ್ಲಿ ಬರೆದಿರುವ ದಿ:08/10/2013 ಮತ್ತು 26/11/2013ರ ಪತ್ರಗಳು;
3) ಪಿವಿಸಿ ಪೈಪ್ಸ್ ಮತ್ತು ಇತರೆ ಸಾಮಗ್ರಿಗಳನ್ನು ಪೂರೈಸುವಂತೆ ಕೋರಿ ಶ್ರೀಲಕ್ಷ್ಮಿ ಹಾರ್ಡ್‌ವೇರ್ಸ್, ಗುತ್ತಲ, ಶ್ರೀ ಲಕ್ಷ್ಮಿ ಎಲೆಕ್ಟ್ರಿಕಲ್ ಸ್ಟೋರ್ಸ್, ಗುತ್ತಲ ಮತ್ತು ಶ್ರೀ ಲಕ್ಷ್ಮಿ ಟ್ರೇಡರ್ಸ್, ಗುತ್ತಲ ರವರಿಗೆ ಪಂಚಾಯತ್ ಲೆಟರ್ ಹೆಡ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಬೇರೆ ಬೇರೆ ದಿನಾಂಕಗಳಂದು [ಕೆಲವೊಂದು ಪತ್ರಗಳಲ್ಲಿ ದಿನಾಂಕ ನಮೂದಿಲ್ಲ] ಬರೆದಿರುವ ಪತ್ರಗಳು;
4) ಶ್ರೀ ಲಕ್ಷ್ಮಿ ಟ್ರೇಡರ್ಸ್, ಗುತ್ತಲ ಈ ಸಂಸ್ಥೆಯ ದರ ನಮೂದಿಸದೇ ಇರುವ 39 ದರ ಪಟ್ಟಿ ಪ್ರತಿಗಳು;
5) ಸಾಮಗ್ರಿಗಳನ್ನು ಪೂರೈಸಲು ಕೋರಿ 3ನೇ ಎದುರುದಾರರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿ ರವರು ಶ್ರೀ ಮಾಲತೇಶ ಹಾರ್ಡ್‌ವೇರ್ಸ್ & ಪೇಂಟ್ಸ್, ಗುತ್ತಲ ರವರಿಗೆ ಪಂಚಾಯತ್ ಲೆಟರ್ ಹೆಡ್‌ನಲ್ಲಿ ನೀಡಿದ ಬೇರೆ ಬೇರೆ ದಿನಾಂಕದ 08 ಪತ್ರಗಳು;
6) ಶ್ರೀ ಮಹಾಲಕ್ಷ್ಮಿ ಎಂಟರ್‌ಪ್ರೈಸಸ್ ಈ ಸಂಸ್ಥೆಯ ದಿನಾಂಕ ಮತ್ತು ಕ್ರಮ ಸಂಖ್ಯೆ ನಮೂದಾಗಿರದ ಒಂದು ದರಪಟ್ಟಿ ಪ್ರತಿ;
7) ಕೃಷ್ಣ ಎಲೆಕ್ಟ್ರಿಕಲ್ಸ್ ವರ್ಕ್ಸ್, ಗುತ್ತಲ, ಖ್ವಾಜಾ ಖುಷಹಾಲ್, ಹಲಗೇರಿ ರಸ್ತೆ, ರಾಣೇಬೆನ್ನೂರು ಮತ್ತು ಅಮರ್‌ಜ್ಯೋತಿ ಎಲೆಕ್ಟ್ರಿಕಲ್ & ರಿವೈಂಡಿಂಗ್ ವರ್ಕ್ಸ್, ಗುತ್ತಲ ಈ ಸಂಸ್ಥೆಗಳ ದಿನಾಂಕ ನಮೂದಾಗಿರದ ಕ್ರಮವಾಗಿ, ಕ್ರ.ಸಂ.260, 92 ಮತ್ತು 922ರ ದರಪಟ್ಟಿ ಪ್ರತಿಗಳು;

BSM/1615/15

(356)



8) ಕೆಜಿಎನ್ ಏಜೆನ್ಸಿ, ರಾಣೇಬೆನ್ನೂರು ಮತ್ತು ಶ್ರೀ ಬಸವೇಶ್ವರ ಎಲೆಕ್ಟ್ರಿಕಲ್ಸ್, ಗುತ್ತಲ ಸಂಸ್ಥೆಗಳ ದಿನಾಂಕ ಮತ್ತು ಕ್ರಮ ಸಂಖ್ಯೆ ನಮೂದಾಗಿರದ ದರಪಟ್ಟಿ ಪ್ರತಿಗಳು;

9) ಖ್ವಾಜಾ ಖುಷಹಾಲ್, ಹಲಗೇರಿ ರಸ್ತೆ, ರಾಣೇಬೆನ್ನೂರು ಈ ಸಂಸ್ಥೆಯ ಈ ಕೆಳಗಿನ ಟ್ಯಾಕ್ಸ್ ಇನ್‌ವಾಯ್ಸ್ \ ಕ್ರೆಡಿಟ್ ಬಿಲ್‌ಗಳಿವೆ –

| ಕ್ರ.ಸಂ. | ಬಿಲ್ ಸಂಖ್ಯೆ ಮತ್ತು ದಿನಾಂಕ | ಮೊತ್ತ ₹ಗಳಲ್ಲಿ |
|---|---|---|
| 1 | 1273, 15/03/2014 | 69915.00 |
| 2 | 1133, 23/01/2013 | 32790.00 |
| 3 | 1272, 04/03/2014 | 280841.00 |
| 4 | 1265, 05/02/2014 | 21702.00 |
| 5 | 1231, 07/12/2013 | 34646.00 |
| 6 | 1233, 07/12/2013 | 103949.00 |
| 7 | 1232, 07/12/2013 | 77923.00 |
| 8 | 1288, 10/06/2014 | 31334.00 |
| 9 | 1234, 07/12/2013 | 2205.00 |
| 10 | 1320, 09/09/2014 | 50460.00 |
| 11 | 1301, 05/02/2014 | 145063.00 |
| 12 | 1166, 09/04/2013 | 6816.00 |
| 13 | 1123, 29/12/2012 | 40048.00 |
| 14 | 1218, 08/10/2013 | 86711.00 |
| 15 | 1217, 08/10/2013 | 92313.00 |
| 16 | 1201, 06/08/2013 | 85935.00 |
| **ಒಟ್ಟು ಮೊತ್ತ** | | **1162651.00** |
| ಕ್ರ.ಸಂ.11ರ ಬಾಬ್ತು ₹1,45,063/–ಗಳನ್ನು ಚೆಕ್ ಸಂಖ್ಯೆ:13407 ದಿ:05/11/2014ರಲ್ಲಿ ಹಾಗೂ ಕ್ರ.ಸಂ.12 ರಿಂದ 16ರ ಬಾಬ್ತು ₹3,11,823/–ಗಳನ್ನು ಚೆಕ್ ಸಂಖ್ಯೆ:005894 ದಿ:12/06/2014ರಲ್ಲಿ ನೀಡಿದೆ. | | |

10) ಅಮರ್‌ಜ್ಯೋತಿ ಎಲೆಕ್ಟ್ರಿಕಲ್ & ರಿವೈಂಡಿಂಗ್ ವರ್ಕ್ಸ್, ಗುತ್ತಲ ಈ ಸಂಸ್ಥೆಯ ಈ ಕೆಳಗಿನ ಟ್ಯಾಕ್ಸ್ ಇನ್‌ವಾಯ್ಸ್ \ ಕ್ರೆಡಿಟ್ ಬಿಲ್‌ಗಳಿವೆ –

| ಕ್ರ.ಸಂ. | ಬಿಲ್ ಸಂಖ್ಯೆ ಮತ್ತು ದಿನಾಂಕ | ಮೊತ್ತ ₹ಗಳಲ್ಲಿ |
|---|---|---|
| 1 | 931, 10/04/2014 | 5200.00 |
| 2 | 932, 16/04/2014 | 5515.00 |
| 3 | 948, 08/07/2014 | 3380.00 |
| 4 | 946, 06/06/2014 | 3360.00 |

357



| | | |
|---|---|---|
| 5 | 950, 17/07/2014 | 7355.00 |
| 6 | 949, 15/07/2014 | 7155.00 |
| 7 | 953, 03/08/2014 | 5120.00 |
| 8 | 952, 18/07/2014 | 5555.00 |
| 9 | 956, 13/08/2014 | 2880.00 |
| 10 | 955, 03/08/2014 | 1530.00 |
| 11 | 959, 23/08/2014 | 3960.00 |
| 12 | 957, 13/08/2014 | 5770.00 |
| 13 | 962, 01/09/2014 | 5770.00 |
| 14 | 960, 24/08/2014 | 5120.00 |
| 15 | 942, 18/06/2014 | 8100.00 |
| 16 | 945, 27/06/2014 | 5100.00 |
| 17 | 943, 20/06/2014 | 5375.00 |
| 18 | 910, 20/01/2014 | 7120.00 |
| 19 | 905, 02/01/2014 | 6280.00 |
| 20 | 912, 20/01/2014 | 5480.00 |
| 21 | 915, 25/01/2014 | 6400.00 |
| 22 | 916, 29/01/2014 | 6735.00 |
| 23 | 400, 28/01/2014 | 870.00 |
| 24 | 920, 05/02/2014 | 5505.00 |
| 25 | 918, 02/02/2014 | 5720.00 |
| 26 | 924, 19/02/2014 | 5105.00 |
| 27 | 923, 09/02/2014 | 5720.00 |
| 28 | 927, 03/03/2014 | 5410.00 |
| 29 | 925, 01/03/2014 | 5405.00 |
| 30 | 929, 19/03/2014 | 6020.00 |
| 31 | 928, 09/03/2014 | 7470.00 |
| 32 | 930, 08/04/2014 | 5230.00 |
| 33 | 939, 06/06/2014 | 1925.00 |
| 34 | 940, 06/06/2014 | 13500.00 |
| 35 | 935, 29/04/2014 | 6905.00 |
| 36 | 938, 30/05/2014 | 5120.00 |
| 37 | 933, 27/04/2014 | 6500.00 |
| 38 | 936, 28/05/2014 | 7930.00 |

BGM/1615/15

358



| | |
|---|---|
| **ಒಟ್ಟು ಮೊತ್ತ** | **212595.00** |
| ಕ್ರ.ಸಂ.1, 2 ಹಾಗೂ 18 ರಿಂದ 32ರ ಬಾಬ್ತು ₹95,185/–ಗಳನ್ನು ಚೆಕ್ ಸಂಖ್ಯೆ:005895 ದಿ:16/06/2014ರಲ್ಲಿ ನೀಡಿದೆ. | |

11) ಶ್ರೀ ಮಾಲತೇಶ ಹಾರ್ಡ್‌ವೇರ್ಸ್ & ಪೇಂಟ್ಸ್, ಗುತ್ತಲ ಈ ಸಂಸ್ಥೆಯ ಈ ಕೆಳಗಿನ ನಗದು ಬಿಲ್‌ಗಳಿವೆ –

| ಕ್ರ.ಸಂ. | ಬಿಲ್ ಸಂಖ್ಯೆ ಮತ್ತು ದಿನಾಂಕ | ಮೊತ್ತ ₹ಗಳಲ್ಲಿ |
|---|---|---|
| 1 | 1, 24/06/2013 | 8260.00 |
| 2 | 100, 28/05/2013 | 14421.00 |
| 3 | 2, 08/02/2013 | 21347.00 |
| 4 | 3, 25/07/2013 | 2083.00 |
| 5 | 4, 26/07/2013 | 3285.00 |
| 6 | 5, 31/07/2013 | 4583.00 |
| 7 | 35, 30/11/2013 | 26237.00 |
| 8 | 31, 27/11/2013 | 5976.00 |
| 9 | 29, 18/10/2013 | 7791.00 |
| 10 | 28, 16/10/2013 | 12490.00 |
| 11 | 27, 08/10/2013 | 12654.00 |
| 12 | 26, 13/09/2013 | 4857.00 |
| 13 | 101, 12/03/2013 | 185920.00 |
| 14 | 94, 08/03/2013 | 100000.00 |
| | **ಒಟ್ಟು ಮೊತ್ತ** | **409904.00** |

12) ಶ್ರೀ ಮಾಲತೇಶ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವರ್ಕ್ಸ್, ಗುತ್ತಲ ಈ ಸಂಸ್ಥೆಯ ಈ ಕೆಳಗಿನ ನಗದು \ ಕ್ರೆಡಿಟ್ ಬಿಲ್‌ಗಳಿವೆ –

| ಕ್ರ.ಸಂ. | ಬಿಲ್ ಸಂಖ್ಯೆ ಮತ್ತು ದಿನಾಂಕ | ಮೊತ್ತ ₹ಗಳಲ್ಲಿ |
|---|---|---|
| 1 | 49, 10/10/2013 | 14340.00 |
| 2 | 50, 10/10/2013 | 3700.00 |
| 3 | 51, 10/10/2013 | 5500.00 |
| 4 | 52, 11/10/2013 | 12350.00 |
| 5 | 65, 28/10/2013 | 16450.00 |
| 6 | 66, 28/10/2013 | 8200.00 |
| 7 | 69, 24/11/2013 | 5100.00 |
| 8 | 67, 05/11/2013 | 8530.00 |

359



| | | |
|---|---|---|
| 9 | 68, 16/11/2013 | 7760.00 |
| 10 | 72, 10/10/2013 | 7750.00 |
| 11 | 71, 10/10/2013 | 8350.00 |
| 12 | 74, 10/10/2013 | 7900.00 |
| 13 | 73, 10/10/2013 | 15020.00 |
| | **ಒಟ್ಟು ಮೊತ್ತ** | **120950.00** |

13) ಶ್ರೀ ಲಕ್ಷ್ಮಿ ಎಲೆಕ್ಟ್ರಿಕ್ ಸ್ಟೋರ್ಸ್, ರಾಣೇಬೆನ್ನೂರು ಈ ಸಂಸ್ಥೆಯ ಈ ಕೆಳಗಿನ ಟ್ಯಾಕ್ಸ್ ಇನ್‌ವಾಯ್ಸ್ \ ಕ್ರೆಡಿಟ್ ಬಿಲ್‌ಗಳಿವೆ –

| ಕ್ರ.ಸಂ. | ಬಿಲ್ ಸಂಖ್ಯೆ ಮತ್ತು ದಿನಾಂಕ | ಮೊತ್ತ ₹ಗಳಲ್ಲಿ |
|---|---|---|
| 1 | 3632, 27/07/2012 | 144260.00 |
| 2 | 3633, 28/07/2012 | 66012.00 |
| 3 | 4043, 29/01/2014 | 103262.00 |
| 4 | 4044, 29/01/2014 | 92373.00 |
| 5 | 4045, 29/01/2014 | 92968.00 |
| | **ಒಟ್ಟು ಮೊತ್ತ** | **498875.00** |
| ಸದರಿ ಮೊತ್ತವನ್ನು ಚೆಕ್ ಸಂಖ್ಯೆ:005893 ದಿ:12/06/2014ರಲ್ಲಿ ನೀಡಿದ ಬಾಬ್ತು ಸದರಿ ಸಂಸ್ಥೆಯು ನೀಡಿರುವ ರಸೀದಿ ಸಂಖ್ಯೆ:1368 ದಿ:12/06/2014 ಲಭ್ಯವಿದೆ. | | |

14) ಶ್ರೀ ಲಕ್ಷ್ಮಿ ಟ್ರೇಡರ್ಸ್, ಗುತ್ತಲ ಈ ಸಂಸ್ಥೆಯ ಈ ಕೆಳಗಿನ ನಗದು\ ಟ್ಯಾಕ್ಸ್ ಇನ್‌ವಾಯ್ಸ್ \ ಕ್ರೆಡಿಟ್ ಬಿಲ್‌ಗಳಿವೆ –

| ಕ್ರ.ಸಂ. | ಬಿಲ್ ಸಂಖ್ಯೆ ಮತ್ತು ದಿನಾಂಕ | ಮೊತ್ತ ₹ಗಳಲ್ಲಿ |
|---|---|---|
| 1 | 2147, 21/06/2014 | 70800.00 |
| 2 | 2146, 28/04/2014 | 185000.00 |
| 3 | 2114, 09/06/2014 | 7464.00 |
| 4 | 2115, 09/06/2014 | 6622.00 |
| 5 | 2116, 09/06/2014 | 61301.00 |
| 6 | 2117, 09/06/2014 | 13891.00 |
| 7 | 2118, 09/06/2014 | 36683.00 |
| 8 | 2119, 09/06/2014 | 17926.00 |
| 9 | 2120, 09/06/2014 | 6641.00 |
| 10 | 2121, 09/06/2014 | 7784.00 |

ಡಿಎಸ್ಎ/1615/15
360



| | | |
|---|---|---|
| 11 | 2122, 09/06/2014 | 17923.00 |
| 12 | 2123, 09/06/2014 | 15660.00 |
| 13 | 2124, 09/06/2014 | 12422.00 |
| 14 | 2125, 09/06/2014 | 3333.00 |
| 15 | 2126, 09/06/2014 | 27819.00 |
| 16 | 2127, 09/06/2014 | 7086.00 |
| 17 | 2128, 09/06/2014 | 14763.00 |
| 18 | 2129, 09/06/2014 | 16176.00 |
| 19 | 2130, 09/06/2014 | 36625.00 |
| 20 | 2148, -- | 14844.00 |
| **ಒಟ್ಟು ಮೊತ್ತ** | | **580763.00** |
| ಕ್ರ.ಸಂ.1ರ ಬಾಬ್ತು ₹70,800/-ಗಳನ್ನು ಚೆಕ್ ಸಂಖ್ಯೆ:005900 ದಿ:21/06/2014ರಲ್ಲಿ ಹಾಗೂ ಕ್ರ.ಸಂ.3 ರಿಂದ 19ರ ಬಾಬ್ತು ₹3,10,119/-ಗಳನ್ನು ಚೆಕ್ ಸಂಖ್ಯೆ:005899 ದಿ:21/06/2014 ರಲ್ಲಿ ನೀಡಿದೆ. | | |

15) ಬನಶಂಕರಿ ಜೆರಾಕ್ಸ್, ಗುತ್ತಲ ಈ ಸಂಸ್ಥೆಯ ಈ ಕೆಳಗಿನ ನಗದು ಬಿಲ್‌ಗಳಿವೆ –

| ಕ್ರ.ಸಂ. | ಬಿಲ್ ಸಂಖ್ಯೆ ಮತ್ತು ದಿನಾಂಕ | ಮೊತ್ತ ₹ಗಳಲ್ಲಿ |
|---|---|---|
| 1 | --- 04/12/2014 | 6900.00 |
| 2 | --- | 3562.00 |
| **ಒಟ್ಟು ಮೊತ್ತ** | | **10462.00** |

16) ಕೆ.ಕೆ.ಪೈಪ್ಸ್, ರಾಣೇಬೆನ್ನೂರು ರವರಿಗೆ ಬಿಲ್ ಸಂಖ್ಯೆ:1301ರ ಬಾಬ್ತು ಚೆಕ್ ಸಂಖ್ಯೆ:013407ರಲ್ಲಿ ಒಟ್ಟು ₹1,45,063/-ಗಳನ್ನು ಪಾವತಿ ಮಾಡಿದ ಬಾಬ್ತು ಸದರಿ ಸಂಸ್ಥೆಯು ನೀಡಿರುವ ರಸೀದಿ ಸಂಖ್ಯೆ:251 ದಿ:05/11/2014;

17) ಕೆ.ಕೆ.ಪೈಪ್ಸ್, ರಾಣೇಬೆನ್ನೂರು ರವರಿಗೆ ಬಿಲ್ ಸಂಖ್ಯೆ:1123, 1166, 1201, 1217 ಮತ್ತು 1218ರ ಬಾಬ್ತು ಒಟ್ಟು ₹3,11,823/-ಗಳನ್ನು ಪಾವತಿ ಮಾಡಿದ ಬಾಬ್ತು ಸದರಿ ಸಂಸ್ಥೆಯು ನೀಡಿರುವ ರಸೀದಿ ಸಂಖ್ಯೆ:243 ದಿ:12/06/2014;

18) ಹಾವೇರಿ ತಾಲ್ಲೂಕಿನ ಗುತ್ತಲ ಗ್ರಾಮದ ಚೆಂದ ರವರ ಮನೆಯಿಂದ ಇಚ್ಚಂಗಿ ಬಸಣ್ಣ ರವರ ಮನೆಯವರೆಗೆ ಮನೆಯವರೆಗೆ ಪಕ್ಕಾ ಗಟಾರ ನಿರ್ಮಾಣ [ಅಂದಾಜು ಮೊತ್ತ ₹0.99 ಲಕ್ಷ – 2014-15ನೇ ಸಾಲಿನ 13ನೇ ಹಣಕಾಸು ಯೋಜನೆ] ಈ ಕಾಮಗಾರಿಯನ್ನು ಶ್ರೀ.ಎಂ.ಹೆಚ್.ರಿತ್ತಿ, ಗುತ್ತಿಗೆದಾರರಿಗೆ 1ನೇ ಎದುರುದಾರರು ಒಪ್ಪಂದ ಪತ್ರದಡಿ ವಹಿಸಿದ್ದಾರೆ. ಸದರಿ ಕಾಮಗಾರಿಗೆ ಸಂಬಂಧಿಸಿದ ಅಂದಾಜು ಪಟ್ಟಿ, ಒಪ್ಪಂದ ಪತ್ರ, ಬಿಲ್, ಇತ್ಯಾದಿ ದಾಖಲೆಗಳಿವೆ;

361



19) ಹಾವೇರಿ ತಾಲ್ಲೂಕಿನ ಗುತ್ತಲ ಗ್ರಾಮದ ಮಲಕಪ್ಪ ಸನದಿ ರವರ ಮನೆಯಿಂದ ಮಿನಿ ವಾಟರ್ ಟ್ಯಾಂಕ್ ವರೆಗಿನ ರಸ್ತೆ ಅಭಿವೃದ್ಧಿ ಮತ್ತು ಗುತ್ತಲದಲ್ಲಿ ಟ್ಯಾಂಕ್ ರಿಪೇರಿ ಕಾಮಗಾರಿ [ಅಂದಾಜು ಮೊತ್ತ ₹73,388/–, 2014–15ನೇ ಸಾಲಿನ 13ನೇ ಹಣಕಾಸು ಯೋಜನೆ] ಈ ಕಾಮಗಾರಿಯನ್ನು ಶ್ರೀ.ಹೆಚ್.ಡಿ.ಅರಿಕಟ್ಟಿ, ಗುತ್ತಿಗೆದಾರರಿಗೆ 1ನೇ ಎದುರುದಾರರು ಒಪ್ಪಂದ ಪತ್ರದಡಿ ವಹಿಸಿದ್ದಾರೆ. ಸದರಿ ಕಾಮಗಾರಿಗೆ ಸಂಬಂಧಿಸಿದ ಅಂದಾಜು ಪಟ್ಟಿ, ಒಪ್ಪಂದ ಪತ್ರ, ಬಿಲ್ ಇತ್ಯಾದಿ ದಾಖಲೆಗಳಿವೆ;

20) 2014–15ನೇ ಸಾಲಿನ 13ನೇ ಹಣಕಾಸು ಕ್ರಿಯಾ ಯೋಜನೆ ಅನುದಾನದಲ್ಲಿ ಶೇ.3 ಅಂಗವಿಕಲರ ಕಲ್ಯಾಣಕ್ಕಾಗಿ ಮೀಸಲಿಟ್ಟ ಅನುದಾನದಲ್ಲಿ ಅಂಗವಿಕಲರಿಗೆ ಗಣಕಯಂತ್ರ ತರಬೇತಿ ನೀಡುವ ಬಾಬ್ತು ಶಿವಾಲಯ ಕಂಪ್ಯೂಟರ್ ಎಜುಕೇಷನ್, ಗುತ್ತಲ, ಶಿವ ಕಂಪ್ಯೂಟರ್ಸ್, ಗುತ್ತಲ ಮತ್ತು ಹೈಟೆಕ್ ಕಂಪ್ಯೂಟರ್ ಎಜುಕೇಷನ್, ಗುತ್ತಲ ರವರು ದರಪಟ್ಟಿಗಳನ್ನು ಸಲ್ಲಿಸಿದ್ದು, ಸದರಿ ದರಪಟ್ಟಿಗಳಲ್ಲಿ ದಿನಾಂಕ ನಮೂದಿಲ್ಲ. ಗಣಕಯಂತ್ರ ತರಬೇತಿ ನೀಡಿದ ಬಾಬ್ತು ಶಿವಾಲಯ ಕಂಪ್ಯೂಟರ್ ಎಜುಕೇಷನ್, ಗುತ್ತಲ ಸಂಸ್ಥೆಗೆ ಚೆಕ್ ಸಂಖ್ಯೆ:13403 ದಿ:04/08/14ರಲ್ಲಿ ₹71,400/–ಗಳನ್ನು ನೀಡಿದ ಸದರಿ ಸಂಸ್ಥೆಯ ರಸೀದಿ;

21) ಹಾವೇರಿ ತಾಲ್ಲೂಕಿನ ಗುತ್ತಲ ಗ್ರಾಮ ಪಂಚಾಯತ್ ಆವರಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಸಿಂಟೆಕ್ಸ್ ಹಾಗೂ ಪೈಪ್‌ಲೈನ್ ಖರೀದಿ [ಅಂದಾಜು ಮೊತ್ತ ₹0.75 ಲಕ್ಷ 2013–14ನೇ ಸಾಲಿನ 13ನೇ ಹಣಕಾಸು ಯೋಜನೆ] ಗೆ ಸಂಬಂಧಿಸಿದ ಅಂದಾಜು ಪಟ್ಟಿ, ಕರಾರು, ಬಿಲ್ ಇತ್ಯಾದಿ ದಾಖಲೆಗಳಿವೆ. ಈ ಕಾಮಗಾರಿಯನ್ನು ಶ್ರೀ.ಎಂ.ಹೆಚ್.ರಿತ್ತಿ, ಗುತ್ತಿಗೆದಾರರಿಗೆ 1 ಮತ್ತು 4ನೇ ಎದುರುದಾರರು ಒಪ್ಪಂದ ಪತ್ರದಡಿ ವಹಿಸಿ, ಬಿಲ್ಲಿನ ಮೊತ್ತವನ್ನು ಗುತ್ತಿಗೆದಾರರಿಗೆ ನೀಡಿದೆ;

22) ಹಾವೇರಿ ತಾಲ್ಲೂಕಿನ ಗುತ್ತಲ ಗ್ರಾಮ ಪಂಚಾಯತ್ ಆವರಣದಲ್ಲಿ ಶುದ್ಧ ಕುಡಿಯುವ ನೀರಿನ ಕಟ್ಟಡ ನಿರ್ಮಾಣ ಕಾಮಗಾರಿ [ಅಂದಾಜು ಮೊತ್ತ ₹0.75 ಲಕ್ಷ 2013–14ನೇ ಸಾಲಿನ 13ನೇ ಹಣಕಾಸು ಯೋಜನೆ] ಈ ಕಾಮಗಾರಿಯನ್ನು ಶ್ರೀ.ಎಂ.ಹೆಚ್.ರಿತ್ತಿ, ಗುತ್ತಿಗೆದಾರರಿಗೆ 1 ಮತ್ತು 4ನೇ ಎದುರುದಾರರು ಒಪ್ಪಂದ ಪತ್ರದಡಿ ವಹಿಸಿದ್ದಾರೆ. ಸದರಿ ಕಾಮಗಾರಿಗೆ ಸಂಬಂಧಿಸಿದ ಅಂದಾಜು ಪಟ್ಟಿ, ಒಪ್ಪಂದ ಪತ್ರ, ಬಿಲ್ [ಮೊತ್ತ ₹71,240/–], ಇತ್ಯಾದಿ ದಾಖಲೆಗಳಿವೆ. ಬಿಲ್ಲಿನ ಮೊತ್ತವನ್ನು 1 ಮತ್ತು 4ನೇ ಎದುರುದಾರರು ಗುತ್ತಿಗೆದಾರರಿಗೆ ನೀಡಿದೆ;

23) ಹಾವೇರಿ ತಾಲ್ಲೂಕಿನ ಗುತ್ತಲ ಗ್ರಾಮದ ಅಜ್ಜಯ್ಯನ ಮಠದಿಂದ ನವಲೆ ಯವರ ಮನೆಯವರೆಗೆ ಗಟಾರ ನಿರ್ಮಾಣ ಕಾಮಗಾರಿ [ಅಂದಾಜು ಮೊತ್ತ ₹0.70 ಲಕ್ಷ, 2013–14ನೇ ಸಾಲಿನ 13ನೇ ಹಣಕಾಸು ಯೋಜನೆ] ಈ ಕಾಮಗಾರಿಯನ್ನು ಶ್ರೀ.ಎಂ.ಹೆಚ್.ರಿತ್ತಿ, ಗುತ್ತಿಗೆದಾರರಿಗೆ 1 ಮತ್ತು 4ನೇ ಎದುರುದಾರರು ಒಪ್ಪಂದ ಪತ್ರದಡಿ ವಹಿಸಿದ್ದಾರೆ. ಸದರಿ ಕಾಮಗಾರಿಗೆ ಸಂಬಂಧಿಸಿದ ಅಂದಾಜು ಪಟ್ಟಿ, ಒಪ್ಪಂದ ಪತ್ರ, ಬಿಲ್ [ಮೊತ್ತ ₹66,677/–], ಇತ್ಯಾದಿ ದಾಖಲೆಗಳಿವೆ. ಬಿಲ್ಲಿನ ಮೊತ್ತವನ್ನು 1 ಮತ್ತು 4ನೇ ಎದುರುದಾರರು ಗುತ್ತಿಗೆದಾರರಿಗೆ ನೀಡಿದೆ;

24) ಹಾವೇರಿ ತಾಲ್ಲೂಕಿನ ಗುತ್ತಲ ಗ್ರಾಮದ ಕುಂಬಾರಗೇರಿ ಖಾಜಿ ರವರ ಮನೆಯ ಹತ್ತಿರ ಸಿ.ಡಿ ನಿರ್ಮಾಣ ಕಾಮಗಾರಿ [ಅಂದಾಜು ಮೊತ್ತ ₹0.99 ಲಕ್ಷ, 2014–15ನೇ ಸಾಲಿನ 13ನೇ ಹಣಕಾಸು ಯೋಜನೆ] ಈ ಕಾಮಗಾರಿಯನ್ನು ಶ್ರೀ.ಎಂ.ಹೆಚ್.ರಿತ್ತಿ, ಗುತ್ತಿಗೆದಾರರಿಗೆ 1 ಮತ್ತು 4ನೇ ಎದುರುದಾರರು ಒಪ್ಪಂದ ಪತ್ರದಡಿ ವಹಿಸಿದ್ದಾರೆ. ಸದರಿ ಕಾಮಗಾರಿಗೆ ಸಂಬಂಧಿಸಿದ ಅಂದಾಜು ಪಟ್ಟಿ, ಒಪ್ಪಂದ ಪತ್ರ, ಭಾವಚಿತ್ರಗಳು, ಬಿಲ್ ಇತ್ಯಾದಿ ದಾಖಲೆಗಳಿವೆ;

.BGm/1615/15

(362)



25) ಮಾಲತೇಶ್ ಜೆರಾಕ್ಸ್ ಸೆಂಟರ್, ಗುತ್ತಲ ಈ ಸಂಸ್ಥೆಯ ದಿ:19/03/15ರ ನಗದು ಬಿಲ್ ಸಂಖ್ಯೆ:132 ಮೊತ್ತ ₹456/–;

26) ಶ್ರೀ.ನಾಗಪ್ಪ ಮೂರಪ್ಪ ಇಚ್ಚಂಗಿ, ಗುತ್ತಲ, ಟ್ರ್ಯಾಕ್ಟರ್ ಬಾಡಿಗೆದಾರರು ಇವರು ತ್ಯಾಜ್ಯ ವಿಲೇವಾರಿ ಮಾಡಿದ ಬಾಬ್ತು ₹39,790/–ಗಳನ್ನು ಸ್ವೀಕರಿಸಿದ ಬಗ್ಗೆ ರಸೀದಿ ಮತ್ತು 3 ದರಪಟ್ಟಿಗಳು;

27) ಬೇರೆ ಬೇರೆ ಸಂಸ್ಥೆಗಳಿಗೆ ಬೇರೆ ಬೇರೆ ಚೆಕ್‌ಗಳ ಮುಖಾಂತರ ಹಣ ಪಾವತಿ ಮಾಡುವ ಬಗ್ಗೆ 1 ಮತ್ತು 4ನೇ ಎದುರುದಾರರುಗಳು ಸಹಿ ಮಾಡಿದ 14 ಸಾದಿಲ್ವಾರು ಬಿಲ್‌ಗಳು.

28) 2013–14ನೇ ಸಾಲಿನ 13ನೇ ಹಣಕಾಸು ಯೋಜನೆಯ ಜಮಾ–ಖರ್ಚಿಗೆ ಸಂಬಂಧಿಸಿದ ನಗದು ವಹಿಯ ಪ್ರತಿ.

6. ಮೇಲಿನ ಖಂಡಿಕೆ–5(1) ರಿಂದ (3)ರ ಪತ್ರಗಳಲ್ಲಿ 1 ಮತ್ತು 4ನೇ ಎದುರುದಾರರುಗಳು ಕಾರ್ಯಾದೇಶ ನೀಡುವ ಮೊದಲು ಕೆಎಫ್‌ಸಿ ಪರಿಚ್ಛೇದ 17 ಮತ್ತು ಸಾದಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55(49)(ಎ)ರನ್ವಯ ಸ್ಪರ್ಧಾತ್ಮಕ ಕೊಟೇಷನ್ ಕರೆದ ದಾಖಲೆಗಳಿಲ್ಲ. ಕಾರಣ, ಸದರಿ ಕಾರ್ಯಾದೇಶಗಳು ನಿಯಮಬಾಹಿರವಾಗಿದೆ.

7. ಮೇಲಿನ ಖಂಡಿಕೆ–5(4)ರಲ್ಲಿನ ದರಪಟ್ಟಿಗಳಲ್ಲಿ ಸಾಮಗ್ರಿ ಮತ್ತು ಪ್ರಮಾಣದ ನಮೂದು ಮಾತ್ರ ಇದ್ದು, ಯಾವುದೇ ದರವನ್ನು ನಮೂದಿಸಿಲ್ಲ.

8. ಮೇಲಿನ ಖಂಡಿಕೆ–5(5)ರ ಪತ್ರಗಳಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಪಂಚಾಯತ್ ಅಧ್ಯಕ್ಷರು ಕಾರ್ಯಾದೇಶ ನೀಡುವ ಮೊದಲು ಕೆಎಫ್‌ಸಿ ಪರಿಚ್ಛೇದ 17 ಮತ್ತು ಸಾದಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55(49)(ಎ)ರನ್ವಯ ಸ್ಪರ್ಧಾತ್ಮಕ ಕೊಟೇಷನ್ ಕರೆದ ದಾಖಲೆಗಳಿಲ್ಲ. ಕಾರಣ, ಸದರಿ ಕಾರ್ಯಾದೇಶಗಳು ನಿಯಮಬಾಹಿರವಾಗಿದೆ.

9. ಮೇಲಿನ ಖಂಡಿಕೆ–5(6) ರಲ್ಲಿನ ದರಪಟ್ಟಿಯಲ್ಲಿ ದಿನಾಂಕ ಮತ್ತು ಕ್ರಮ ಸಂಖ್ಯೆ ನಮೂದಿಲ್ಲ, ಸದರಿ ದರಪಟ್ಟಿಯನ್ನು 1 ಮತ್ತು 4ನೇ ಎದುರುದಾರರು ಪಂಚಾಯತ್ ಪರವಾಗಿ ಪಡೆದಿದ್ದಾರೆ.

10. ಮೇಲಿನ ಖಂಡಿಕೆ–5(7)ರಲ್ಲಿನ ದರಪಟ್ಟಿಗಳಲ್ಲಿ ದಿನಾಂಕ ನಮೂದಿಲ್ಲ, ಸದರಿ ದರಪಟ್ಟಿಗಳನ್ನು 1 ಮತ್ತು 4ನೇ ಎದುರುದಾರರು ಪಂಚಾಯತ್ ಪರವಾಗಿ ಪಡೆದಿದ್ದಾರೆ.

11. ಮೇಲಿನ ಖಂಡಿಕೆ–5(8)ರಲ್ಲಿನ ದರಪಟ್ಟಿಗಳಲ್ಲಿ ದಿನಾಂಕ ಮತ್ತು ಕ್ರಮ ಸಂಖ್ಯೆ ನಮೂದಿಲ್ಲ, ಸದರಿ ದರಪಟ್ಟಿಗಳನ್ನು 1 ಮತ್ತು 4ನೇ ಎದುರುದಾರರು ಪಂಚಾಯತ್ ಪರವಾಗಿ ಪಡೆದಿದ್ದಾರೆ.

363



12. ಮೇಲಿನ ಖಂಡಿಕೆ–5(9 ರಿಂದ 14)ರಲ್ಲಿನ ಖರೀದಿಗಳ ಒಟ್ಟು ಮೌಲ್ಯ ಕ್ರಮವಾಗಿ, ₹11,62,651/–, ₹2,12,595/–, ₹4,09,904/–, ₹1,20,950/–, ₹4,98,875/– ಮತ್ತು ₹5,80,763/-ಗಳಾಗಿದ್ದು, ಕೆಟಿಪಿಪಿ ಕಾಯಿದೆ ಅನ್ವಯ ಸದರಿ ಖರೀದಿಗೆ ಟೆಂಡರ್ ಕರೆಯಬೇಕಿದ್ದು, ಟೆಂಡರ್ ಕರೆದ ದಾಖಲೆಗಳಿಲ್ಲ. ಮುಂದುವರೆದು, ಸದರಿ ಖರ್ಚಿಗೆ ಸಂಬಂಧಿಸಿದಂತೆ ಆಹ್ವಾನಿಸಿದ ದರ ಪಟ್ಟಿ ಇತ್ಯಾದಿ ದಾಖಲೆಗಳಿಲ್ಲ. ಕಾರಣ, ಸದರಿ ಎಲ್ಲಾ ಪಾವತಿಗಳು [ಒಟ್ಟು ₹29,85,738/–] ನಿಯಮಬಾಹಿರವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.
13. ಮೇಲಿನ ಖಂಡಿಕೆ–5(15)ರ ಖರೀದಿಗೆ ಸಂಬಂಧಿಸಿದಂತೆ ದರಪಟ್ಟಿ ಆಹ್ವಾನಿಸಿದ ದಾಖಲೆಗಳಿಲ್ಲ. ಕಾರಣ, ಸದರಿ ಖರೀದಿ ಮತ್ತು ಆ ಬಾಬ್ತು ₹10,462/– ಹಣ ಪಾವತಿ ನಿಯಮಬಾಹಿರವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.
14. ಮೇಲಿನ ಖಂಡಿಕೆ–5(16 & 17)ರ ಬಾಬ್ತು ಸದರಿ ಸಂಸ್ಥೆಗೆ ಒಟ್ಟು ₹4,56,886/–ಗಳನ್ನು ಪಾವತಿಸಿದೆ. ಸದರಿ ಪಾವತಿಗಳಿಗೆ ಸಂಬಂಧಿಸಿದ ಬಿಲ್ಲುಗಳಾಗಲೀ ಅಥವಾ ವೋಚರ್‌ಗಳಾಗಲೀ ಲಭ್ಯವಿಲ್ಲ. ಕಾರಣ, ಸದರಿ ಪಾವತಿ ನಿಯಮಬಾಹಿರವಾಗಿದೆ.
15. ಮೇಲಿನ ಖಂಡಿಕೆ–5(18)ರಲ್ಲಿ ಹೇಳಿದ ಕಾಮಗಾರಿಯ ಅಳತೆಯನ್ನು ಶ್ರೀ.ವೈ.ಕೆ.ಮಟೆಗಾರ, ಕಿರಿಯ ಅಭಿಯಂತರರು ದಾಖಲಿಸಿದ್ದಾರೆಂದು ಹೇಳಿದ್ದು, ಬಿಲ್ಲಿನ ಮೊತ್ತ ₹91,682/– (ಶಾಸನಾತ್ಮಕ ಕಡಿತ ₹6,484/–ಗಳು ಹೊರತುಪಡಿಸಿ) ಅನ್ನು 1 ಮತ್ತು 4ನೇ ಎದುರುದಾರರು ನೀಡಿದ್ದಾರೆ. ಮುಂದುವರೆದು, ಸದರಿ ಕಾಮಗಾರಿಯ ಅಂದಾಜು ₹25,000/–ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಜೆಟ್) ನಿಯಮಗಳು, 2006ರ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 4ನೇ ಎದುರುದಾರರು ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಮಾಡಬೇಕಿದ್ದು, ಆದರೆ ಸದರಿಯವರು ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ. ಸದರಿ ಕಾಮಗಾರಿಯ ಅಳತೆ ವಹಿ ಮತ್ತು ಮುಕ್ತಾಯದ ವರದಿಯಿಲ್ಲ.
16. ಮೇಲಿನ ಖಂಡಿಕೆ–5(19)ರಲ್ಲಿ ಹೇಳಿದ ಕಾಮಗಾರಿಯ ಅಳತೆಯನ್ನು ಶ್ರೀ.ವೈ.ಕೆ.ಮಟೆಗಾರ, ಸಹಾಯಕ ಅಭಿಯಂತರರು ದಾಖಲಿಸಿದ್ದಾರೆಂದು ಹೇಳಿದ್ದು, ಬಿಲ್ಲಿನಲ್ಲಿ ಅಳತೆ ವಹಿಯ ಸಂಖ್ಯೆಯಾಗಲೀ ಅಥವಾ ಪುಟ ಸಂಖ್ಯೆಯನ್ನಾಗಲೀ ನಮೂದಿಸಿಲ್ಲ. ಅಳತೆ ವಹಿ ಮತ್ತು ಮುಕ್ತಾಯದ ವರದಿ ಲಭ್ಯವಿಲ್ಲ. ಹೀಗಿದ್ದರೂ, 1 ಮತ್ತು 4ನೇ ಎದುರುದಾರರು ಗುತ್ತಿಗೆದಾರರಿಗೆ ₹67,067/– (ಶಾಸನಾತ್ಮಕ ಕಡಿತ

B5m/1615/15

(364)



₹6,299/– ಹೊರತುಪಡಿಸಿ) ಅನ್ನು ನೀಡಿದ್ದಾರೆ. ಮುಂದುವರೆದು, ಸದರಿ ಕಾಮಗಾರಿಯ ಅಂದಾಜು ₹25,000/–ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಡ್ಜೆಟ್) ನಿಯಮಗಳು, 2006ರ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 4ನೇ ಎದುರುದಾರರು ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಮಾಡಬೇಕಿದ್ದು, ಆದರೆ ಸದರಿಯವರು ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ.

17. ಮೇಲಿನ ಖಂಡಿಕೆ–5(20)ರಲ್ಲಿ ಹೇಳಿದ ದರಪಟ್ಟಿಗಳಲ್ಲಿ ದಿನಾಂಕ ನಮೂದಾಗಿಲ್ಲ ಮತ್ತು ಅಂಗವಿಕಲರಿಗೆ ಗಣಕಯಂತ್ರ ತರಬೇತಿ ನೀಡಿದೆಯೆಂಬ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಹಣ ಪಡೆದ ಸಂಸ್ಥೆಯು ನೋಂದಾಯಿತ ಸಂಸ್ಥೆಯಾಗಿಲ್ಲ ಹಾಗೂ ಸದರಿ ಸಂಸ್ಥೆಯ ದರಪಟ್ಟಿಯನ್ನು ಅನುಮೋದಿಸಿ, ಕಾರ್ಯಾದೇಶ ನೀಡಿದ ದಾಖಲೆಗಳಿಲ್ಲ. ಕಾರಣ, ಸದರಿ ₹71,400/–ಗಳ ಪಾವತಿ ನಿಯಮಬಾಹಿರವಾಗಿದೆ.

18. ಮೇಲಿನ ಖಂಡಿಕೆ–5(21)ರಲ್ಲಿ ಹೇಳಿದ ಖರೀದಿಯ ಗುತ್ತಿಗೆಯನ್ನು 1 ಮತ್ತು 4ನೇ ಎದುರುದಾರರು ಗುತ್ತಿಗೆದಾರರಿಗೆ ವಹಿಸಿದ್ದಾರೆ. ಅಳತೆಯನ್ನು ಶ್ರೀ.ವೈ.ಕೆ.ಮಟೆಗಾರ, ಕಿರಿಯ ಅಭಿಯಂತರರು ದಾಖಲಿಸಿದ್ದಾರೆಂದು ಹೇಳಿದ್ದು, ಬಿಲ್ಲಿನಲ್ಲಿ ಅಳತೆ ವಹಿಯ ಸಂಖ್ಯೆಯಾಗಲೀ ಅಥವಾ ಪುಟ ಸಂಖ್ಯೆಯನ್ನಾಗಲೀ ನಮೂದಿಸಿಲ್ಲ. ಅಳತೆ ವಹಿ ಲಭ್ಯವಿಲ್ಲ. ಮುಂದುವರೆದು, ಸದರಿ ಸಾಮಗ್ರಿಗಳನ್ನು ದಾಸ್ತಾನಿಗೆ ಪಡೆದ ದಾಖಲೆಗಳಿಲ್ಲ. ಹೀಗಿದ್ದರೂ, 1 ಮತ್ತು 4ನೇ ಎದುರುದಾರರು ಗುತ್ತಿಗೆದಾರರಿಗೆ ₹70,689/– (ಶಾಸನಾತ್ಮಕ ಕಡಿತ ₹4,164/– ಹೊರತುಪಡಿಸಿ) ಅನ್ನು ನೀಡಿದ್ದಾರೆ. ಮುಂದುವರೆದು, ಸದರಿ ಕಾಮಗಾರಿಯ ಅಂದಾಜು ₹25,000/–ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಡ್ಜೆಟ್) ನಿಯಮಗಳು, 2006ರ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 4ನೇ ಎದುರುದಾರರು ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಮಾಡಬೇಕಿದ್ದು, ಆದರೆ ಸದರಿಯವರು ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ.

19. ಮೇಲಿನ ಖಂಡಿಕೆ–5(22)ರಲ್ಲಿ ಹೇಳಿದ ಕಾಮಗಾರಿಯನ್ನು 1 ಮತ್ತು 4ನೇ ಎದುರುದಾರರು ಗುತ್ತಿಗೆದಾರರಿಗೆ ವಹಿಸಿದ್ದಾರೆ. ಕಾಮಗಾರಿಯ ಅಳತೆಯನ್ನು ಶ್ರೀ.ವೈ.ಕೆ.ಮಟೆಗಾರ, ಕಿರಿಯ ಅಭಿಯಂತರರು ದಾಖಲಿಸಿದ್ದಾರೆಂದು ಹೇಳಿದ್ದು, ಬಿಲ್ಲಿನಲ್ಲಿ ಅಳತೆ ವಹಿಯ ಸಂಖ್ಯೆಯಾಗಲೀ ಅಥವಾ ಪುಟ ಸಂಖ್ಯೆನ್ನಾಗಲೀ ನಮೂದಿಸಿಲ್ಲ. ಅಳತೆ ವಹಿ ಮತ್ತು ಮುಕ್ತಾಯದ ವರದಿಯಿಲ್ಲ. ಹೀಗಿದ್ದರೂ, 1 ಮತ್ತು 4ನೇ ಎದುರುದಾರರು ಗುತ್ತಿಗೆದಾರರಿಗೆ ₹71,240/– (ಶಾಸನಾತ್ಮಕ ಕಡಿತ ₹3,749/– ಹೊರತುಪಡಿಸಿ) ಅನ್ನು

365'



ನೀಡಿದ್ದಾರೆ. ಮುಂದುವರೆದು, ಸದರಿ ಕಾಮಗಾರಿಯ ಅಂದಾಜು ₹25,000/–ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಜೆಟ್) ನಿಯಮಗಳು, 2006ರ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 4ನೇ ಎದುರುದಾರರು ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಮಾಡಬೇಕಿದ್ದು, ಆದರೆ ಸದರಿಯವರು ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ.

20. ಮೇಲಿನ ಖಂಡಿಕೆ–5(23)ರಲ್ಲಿ ಹೇಳಿದ ಕಾಮಗಾರಿಯನ್ನು 1 ಮತ್ತು 4ನೇ ಎದುರುದಾರರು ಗುತ್ತಿಗೆದಾರರಿಗೆ ವಹಿಸಿದ್ದಾರೆ. ಕಾಮಗಾರಿಯ ಅಳತೆಯನ್ನು ಶ್ರೀ.ವೈ.ಕೆ.ಮಟಗಾರ, ಕಿರಿಯ ಅಭಿಯಂತರರು ದಾಖಲಿಸಿದ್ದಾರೆಂದು ಹೇಳಿದ್ದು, ಬಿಲ್ಲಿನಲ್ಲಿ ಅಳತೆ ವಹಿಯ ಸಂಖ್ಯೆಯಾಗಲೀ ಅಥವಾ ಪುಟ ಸಂಖ್ಯೆಯನ್ನಾಗಲೀ ನಮೂದಿಸಿಲ್ಲ. ಅಳತೆ ವಹಿ ಮತ್ತು ಮುಕ್ತಾಯದ ವರದಿಯಿಲ್ಲ. ಹೀಗಿದ್ದರೂ, 1 ಮತ್ತು 4ನೇ ಎದುರುದಾರರು ಗುತ್ತಿಗೆದಾರರಿಗೆ ₹66,083/– (ಶಾಸನಾತ್ಮಕ ಕಡಿತ ₹3,593/– ಹೊರತುಪಡಿಸಿ) ಅನ್ನು ನೀಡಿದ್ದಾರೆ. ಮುಂದುವರೆದು, ಸದರಿ ಕಾಮಗಾರಿಯ ಅಂದಾಜು ₹25,000/–ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಜೆಟ್) ನಿಯಮಗಳು, 2006ರ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 4ನೇ ಎದುರುದಾರರು ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಮಾಡಬೇಕಿದ್ದು, ಆದರೆ ಸದರಿಯವರು ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ.

21. ಮೇಲಿನ ಖಂಡಿಕೆ–5(24)ರಲ್ಲಿ ಹೇಳಿದ ಕಾಮಗಾರಿಯ ಅಳತೆಯನ್ನು ಶ್ರೀ.ವೈ.ಕೆ.ಮಟಗಾರ, ಕಿರಿಯ ಅಭಿಯಂತರರು ದಾಖಲಿಸಿದ್ದಾರೆಂದು ಹೇಳಿದ್ದು, ಬಿಲ್ಲಿನಲ್ಲಿ ಅಳತೆ ವಹಿಯ ಸಂಖ್ಯೆಯಾಗಲೀ ಅಥವಾ ಪುಟ ಸಂಖ್ಯೆಯನ್ನಾಗಲೀ ನಮೂದಿಸಿಲ್ಲ. ಅಳತೆ ವಹಿ ಮತ್ತು ಮುಕ್ತಾಯದ ವರದಿಯಿಲ್ಲ. ಹೀಗಿದ್ದರೂ, 1 ಮತ್ತು 4ನೇ ಎದುರುದಾರರು ಗುತ್ತಿಗೆದಾರರಿಗೆ ₹92,190/– (ಶಾಸನಾತ್ಮಕ ಕಡಿತ ₹6,241/– ಹೊರತುಪಡಿಸಿ) ಅನ್ನು ನೀಡಿದ್ದಾರೆ. ಮುಂದುವರೆದು, ಸದರಿ ಕಾಮಗಾರಿಯ ಅಂದಾಜು ₹25,000/–ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಜೆಟ್) ನಿಯಮಗಳು, 2006ರ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 4ನೇ ಎದುರುದಾರರು ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಮಾಡಬೇಕಿದ್ದು, ಆದರೆ ಸದರಿಯವರು ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ.

ಲೋಕಾ/1615/15



366

22. ಮೇಲಿನ ಖಂಡಿಕೆ–5(25)ರ ಪಾವತಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳಿಲ್ಲ.

23. ಮೇಲಿನ ಖಂಡಿಕೆ–5(26)ರ ಪಾವತಿಯನ್ನು ಶ್ರೀ.ನಾಗಪ್ಪ ಪೂರಪ್ಪ ಇಚ್ಛಂಗಿ ರವರಿಗೆ ₹39,790/–ಗಳನ್ನು ಚೆಕ್ ಮೂಲಕ ನೀಡಿದ ದಾಖಲೆಗಳಿಲ್ಲ.

24. ಮೇಲಿನ ಖಂಡಿಕೆಗಳಲ್ಲಿ ಹೇಳಿದ ಖರೀದಿ, ಕಾಮಗಾರಿಗಳ ನಿರ್ವಹಣೆ ಮತ್ತು ಹಣ ಪಾವತಿಯಲ್ಲಿ 2 ಮತ್ತು 3ನೇ ಎದುರುದಾರರುಗಳ ಪಾತ್ರ ಕಂಡು ಬಂದಿಲ್ಲ. ಹಿಂದಿನ ಖಂಡಿಕೆಗಳಲ್ಲಿ ಹೇಳಿದ ಲೋಪಗಳಿಗೆ 1 ಮತ್ತು 4ನೇ ಎದುರುದಾರರುಗಳು ಜವಾಬ್ದಾರರಾಗಿದ್ದಾರೆ. ಸದರಿಯವರುಗಳು ಅಂದಾಜು ₹35,63,565/– [ಮೇಲಿನ ಖಂಡಿಕೆ–5(9 ರಿಂದ 17, 21 ಮತ್ತು 26) ರಂತೆ] ಗಳಿಗೆ ಜವಾಬ್ದಾರರಾಗಿರುವುದು ಮೇಲ್ನೋಟಕ್ಕೆ ಕಂಡು ಬರುವುದರಿಂದ, 1 ಮತ್ತು 4ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

25. ಒಂದು (1) ಮತ್ತು 4ನೇ ಎದುರುದಾರರುಗಳು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬಂದಿದೆ. ಕಾರಣ, ಸದರಿಯವರ ದುರ್ನಡತೆ \ ಕರ್ತವ್ಯ ಲೋಪಕ್ಕೆ ಸಂಬಂಧಿಸಿದಂತೆ, ಇಲಾಖಾ ವಿಚಾರಣೆ ನಡೆಸುವುದು ಅವಶ್ಯವಾಗಿದೆ.

26. ಎರಡು (2) ಮತ್ತು 3ನೇ ಎದುರುದಾರರುಗಳ ಪಾತ್ರ ಕಂಡು ಬರುವುದಿಲ್ಲವಾದ್ದರಿಂದ, ಸದರಿಯವರುಗಳ ವಿರುದ್ಧದ ನಡವಳಿಯನ್ನು ಕೈಬಿಡಲಾಗಿದೆ.

27. ನಾಲ್ಕನೇ (4ನೇ) ಎದುರುದಾರರು ಗ್ರಾಮ ಪಂಚಾಯತ್ ಅಧ್ಯಕ್ಷರಾಗಿದ್ದರಿಂದ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ಸೂಕ್ತ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

28. ಒಂದನೇ (1ನೇ) ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು

ಮಾಡಲಾಗುತ್ತಿದೆ ಹಾಗೂ 1ನೇ ಎದುರುದಾರರು ದಿನಾಂಕ:30/10/2015 ರಂದು ನಿವೃತ್ತಿ ಹೊಂದಿರುವುದರಿಂದ 1ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು **ಕೆಸಿಎಸ್ ನಿಯಮ** 214(2)(ಬಿ)(i)**ರ** ಅಡಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

29. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 1ನೇ ಎದುರುದಾರರು ದಿನಾಂಕ:30/10/2015 ರಂದು ನಿವೃತ್ತಿ ಹೊಂದಿದ್ದಾರೆ.

(ನ್ಯಾಯಮೂರ್ತಿ ಎನ್.ಆನಂದ)
**ಉಪಲೋಕಾಯುಕ್ತ-1,**
**ಕರ್ನಾಟಕ ರಾಜ್ಯ.**